Suicide by an employee of Samyukta Karnataka

ಶ್ರೀ ಎಚ್. ಗಂಗಾಧರನ್.—ಸ್ವಾಮಿ, ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಕಾರ್ಯಾಲಯದಲ್ಲಿ ಕೆಲಸಮಾಡತಕ್ಕಂಥ ವ್ಯಕ್ತಿಯೊಬ್ಬ ಕೆ ಆರ್. ಸಾಗರದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಇವತ್ತು ಆತನ ತಾಯಿ, ಹೆಂಡತಿ, ಮತ್ತು ಮಕ್ಕಳು ನಿರ್ಗತಿಕರಾಗಿದ್ದಾರೆ. ಅವನ ಕುಟುಂಬವರ್ಗದವರಿಗೆ ಧನಸಹಾಯ ಮಾಡಬೇಕೆಂದು ಹೇಳಿ ನಾನು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳಿಸಿಕೊಟ್ಟಿದ್ದೇನೆ.

SPEAKER.—You please approach the Chief Minister.

ಶ್ರೀ ಆರ್ ಗುಂಡೂರಾವ್.—ನೀವು ನನಗೆ ಹೇಳಿ, ನಾನು ಆದಕ್ಕೆ ವಿವರ್ಾಡು ಮಾಡುತ್ತೇನೆ.

ಶ್ರೀ ಎಸ್.ಎಸ್. ಆರಕೇರಿ.—ಸ್ವಾಮಿ, ನಾನು ಒಂದು ವಿಚಾರದಲ್ಲಿ ನೋಟೀಸ್ ಕಳಿಸಿದ್ದೇನೆ. ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

SPEAKER.—There is one Notice given by Sri B. Basavalingappa. You will also be permitted to speak at that time.

Distribution of bad quality rice by the Fair Price Depots at Bangalore

ಶ್ರೀ ಪಿ. ರಾಮದೇವ್.—ಸ್ವಾಮಿ, ನಾನು ತಮ್ಮ ಮುಖಾಂತರ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ರೇಷನ್ ಡಿಪೋಗಳ ಮುಖಾಂತರ ೨೦ ಲಕ್ಷ ಜನರಿಗೆ ಅಕ್ಕಿಯನ್ನು ಸರಬರಾಜು ಮಾಡಿದ್ದಾರೆ. ಅಕ್ಕಿಯಲ್ಲಿ ದುರ್ನಾತ ಇದೆ, ಹುಳು ಇದೆ, ಮುಗ್ಗಲು ವಾಸನೆ ಬರುತ್ತಾ ಇದೆ. ಇದನ್ನು ತಿಂದವರಿಗೆ ಖಾಯಿಲೆ ಬಂದಿದೆ. ಸರ್ಕಾರದವರು ಈ ಕೂಡಲೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡು ಅವರಿಗೆಲ್ಲಾ ಒಳ್ಳೆಯ, ಉತ್ತಮವಾದ ಅಕ್ಕಿಯನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ಅವರು ಯಾವುದೋ ಒಂದು ಅಂಗಡಿಯ ಅಕ್ಕಿಯನ್ನು ತೆಗೆದುಕೊಂಡು ಬಂದು ನೋಡಿ ಅಕ್ಕಿ ದುರ್ನಾತದಿಂದ ಕೂಡಿದೆ, ೨೦ಲಕ್ಷ ಜನ ಅದನ್ನು ತಿಂದಿದ್ದಾರೆ ಅಂತ ಹೇಳುತ್ತಿದ್ದಾರೆ. ಆ ತರಹ ಏನಾದರೂ ಆಗಿದ್ದರೆ ಸಂಬಂಧಪಟ್ಟವರಿಗೆ ಪನಿಷ್‌ಮೆಂಟ್ ಕೊಡುತ್ತೇನೆ. ಅದು ರುಜುವಾತು ಆಗದಿದ್ದರೆ ಅವರೇ ಅದಕ್ಕೆ ಹೊಣೆಯಾಗುತ್ತಾರೆ.

ಅಧ್ಯಕ್ಷರು.—ಮಾನ್ಯ ಇಬ್ರಾಹಿಂರವರೇ, ನೀವು ಹಾಗೆಲ್ಲಾ ಮಾತನಾಡಬೇಡಿ. ಮಾನ್ಯ ಸದಸ್ಯರು ಒಂದು ಮುಖ್ಯವಾದ ವಿಷಯವನ್ನು ಎತ್ತಿದಾಗ ಅದನ್ನು ಪರಿಶೀಲ ಮಾಡಿಸಿ ಕ್ರಮ ತೆಗೆದುಕೊಳ್ಳುವುದು ಸೂಕ್ತ.

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ನಾನು ತಮ್ಮ ಮಾತಿಗೆ ಬೆಲೆ ಕೊಡುತ್ತೇನೆ. ಮಾನ್ಯ ಸದಸ್ಯರು ೨೦ ಲಕ್ಷ ಜನರಿಗೆ ಬೆಂಗಳೂರಿನಲ್ಲಿ ದುರ್ನಾತದಿಂದ ಕೂಡಿರತಕ್ಕಂಥ ಅಕ್ಕಿಯನ್ನು ನಾವು ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇದು ಸರಿಯಲ್ಲ ನನಗೆ ಗೊತ್ತಿರುವ ಮಟ್ಟಿಗೆ ಪ್ರತಿನಿತ್ಯ ಅಕ್ಕಿಯನ್ನು ರಿಲೀಸ್ ಮಾಡಬೇಕಾದರೆ ನಾನೇ ಖುದ್ದಾಗಿ ರಿಲೀಸ್ ಮಾಡುತ್ತೇನೆ. ಅಂತಹದರಲ್ಲೂ ಅವರು ಆ ರೀತಿಯ ಆರೋಪವನ್ನು ಮಾಡುತ್ತಿದ್ದಾರೆ. ಆ ಅಕ್ಕಿಯನ್ನು ಯಾವ ಡಿಪೋದಿಂದ ತಂದಿದ್ದಾರೆಂದು ಹೇಳಲಿ, ನಾನು ಈ ಕೂಡಲೆ ಸಂಬಂಧಪಟ್ಟವರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್.—ಸ್ವಾಮಿ, ಇದು ಪುಲ್ಲೇಶ್ವರಂ ರೇಷನ್ ಡಿಪೋದಿಂದ ತಂದಿರತಕ್ಕಂಥಾದ್ದು, ಅಕ್ಕಿ ದುರ್ನಾತದಿಂದ ಕೂಡಿದೆ. ಮಾನ್ಯ ಮಂತ್ರಿಯವರ ಸವಾಲನ್ನು ನಾನು ಸ್ವೀಕಾರ ಮಾಡುತ್ತೇನೆ. ಅವರು ನನ್ನ ಜೊತೆಯಲ್ಲಿ ಬರಲಿ, ತೋರಿಸುತ್ತೇನೆ. ನಾವು ಈ ಸದನದಲ್ಲಿ ಜವಾಬ್ದಾರಿಯುತವಾಗಿ ಮಾತನಾಡಿದರೂ ಮಾನ್ಯ ಮಂತ್ರಿಯವರು ಜವಾಬ್ದಾರಿಯುತವಾದ ಉತ್ತರವನ್ನು ಕೊಡುವುದಿಲ್ಲ. ಅವರು ಇಂತಹ ದುರ್ನಾತದಿಂದ ಕೂಡಿದ ಅಕ್ಕಿಯನ್ನು ಬೆಂಗಳೂರಿನ ನಾಗರಿಕರಿಗೆ ಕೊಡುವುದು ಬೇಡ. ಇಡೀ ಬೆಂಗಳೂರು ನಗರದಲ್ಲೇ ಇಂತಹ ಒಂದು ಅವ್ಯವಸ್ಥೆ ಇದೆ.

MR. SPEAKER.—I have already informed the concerned Minister and he will check up the matter. You please pass it on to me with all the information. The Minister will verify.

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಇದ್ದಾರೆ ಅವರ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಅವರು ನನ್ನ ಜೊತೆಯಲ್ಲಿ ಬರಲಿ. ಆ ಆಕ್ಕಿಯನ್ನು ನಾನು ಸೀಸ್ ಮಾಡಿಸುತ್ತೇನೆ. (ಮಾನ್ಯ ಸದಸ್ಯರಿಗೆ) ಬನ್ನಿ ನನ್ನ ಜೊತೆಯಲ್ಲಿ, ನಡೆಯಿರಿ ಹೋಗೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರಿಬ್ಬರೂ ಅಲ್ಲಿಗೆ ಹೋಗಲಿ. ಅವರಿಬ್ಬರ ಜೊತೆಯಲ್ಲಿ ನಾವು ಇನ್ನೊಬ್ಬರನ್ನು ಕಳಿಸೋಣ.

SRI B. BASAVALINGAPPA.—Mr. Speaker Sir, Sri Ramdev has raised a question. Now, the way in which Sri Ibrahim is replying and then throwing a challenge is not consistent with public administration and the way he has got to function as a Minister. The hon. Member has been raising certain questions in the interest of the public and those shou'd be answered and met as a Minister and as a Government. Dragging him out and going to a shop and trying to take action against some Officer is wholly inconsistent with public administration. He must take a general view of the matter and what the Member has said and them take a stand to correct the defect. It is not open to a Minister to drag an Hon. Member of the House when he makes allegations and then try to do the job. There are so many things. As a Minister, you have to function as a Government. Decorum, dignity and prestige of the Government should be maintained at all costs.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಬಸವಲಿಂಗಪ್ಪನವರು ಡೀಸೆಸ್ಸ್, ಜೆಕೋರಮ್, ಡಿಗ್ನಿಟಿ ಬಗ್ಗೆ ಹೇಳಿದರು. ಆ ಬಗ್ಗೆ ನಮ್ಮ ನಾಯಕರು ನಮಗೆ ಆದರ್ಶವನ್ನು ಕಲಿಸಿಕೊಟ್ಟಿದ್ದಾರೆ. ಅದರ ಬಗ್ಗೆ ಅವರು ಏನೂ ಹೇಳಬೇಕಾಗಿಲ್ಲ. ಮಾನ್ಯ ಸದಸ್ಯರಾದ ಶ್ರೀ ರಾಮದೇವ್‌ರವರು ಮೊದಲು 'ನನ್ನ ಜೊತೆಯಲ್ಲಿ ಬನ್ನಿ ತೋರಿಸುತ್ತೇನೆ' ಎಂದು ಹೇಳಿದ್ದರಿಂದ 'ನಾನು ನಿಮ್ಮ ಜೊತೆ ಬರುತ್ತೇನೆ, ನಡೆಯಿರಿ' ಎಂದು ಹೇಳಿದೆ. ನಮಗೆ ಗೊತ್ತಿಲ್ಲದ ಹಾಗೆ ಏನೋ ವಿಚಾರಗಳು ನಡೆಯುತ್ತವೆ. ರಾಜ್ಯದಲ್ಲಿರತಕ್ಕಂಥ ಎಲ್ಲಾ ಕಡೆ ಏನೇನು ನಡೆಯುತ್ತದೆ ಎಂಬುದನ್ನು ಈ ಎರಡು ಕಣ್ಣುಗಳಿಂದ ವಾಚ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅವರು ನನ್ನ ಜೊತೆಯಲ್ಲಿ ಬರಲಿ. ಅಲ್ಲಿಗೆ ಸರ್‌ಪ್ರೈಸ್ ವಿಸಿಟ್ ಕೊಟ್ಟು ವಿಚಾರ ಮಾಡೋಣ. ಸಂಬಂಧಪಟ್ಟವರ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ, ಮಾನ್ಯ ರಾಮದೇವ್ ರವರೇ, ನೀವು ನನ್ನ ಜೊತೆಯಲ್ಲಿ ಬನ್ನಿ ಬನ್ನಿ, ನನ್ನ ಜೊತೆಯಲ್ಲಿ ಬನ್ನಿ ಸಹಕರಿಸಿ ಅಂತಹ ದುರ್ನಾತದ ಅಕ್ಕಿ ಎಲ್ಲಿದೆ ಎಂಬುದನ್ನು ತೋರಿಸಿ ಅದನ್ನು ಸೀಸ್ ಮಾಡಿಕೊಂಡು ನಾನೂ ಸಹ ನಿಮ್ಮ ಜೊತೆಯಲ್ಲೇ ಬರುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಅದನ್ನು ಸೀಸ್ ಮಾಡುವುದಕ್ಕೆ ಅಧಿಕಾರಿಗಳು ಇದ್ದಾರೆ. ಮಾನ್ಯ ಮಂತ್ರಿಯವರು ಅದಕ್ಕೆ ಹೇಗೆಂತವರು ಬೇಡ

ಅಧ್ಯಕ್ಷರು.—ಮಾನ್ಯ ರಾಮದೇವ್‌ರವರೇ, ಈ ವಿಚಾರದಲ್ಲಿ ಏನೇನು ಡೀಟೈಲ್ಸ್ ಇವೆ ಅದನ್ನು ಕಳಿಸಿಕೊಡಿ. ನಾನು ಅದನ್ನು ಮಾನ್ಯ ಮಂತ್ರಿಯವರಿಗೆ ಪಾಸ್ ಆನ್ ಮಾಡುತ್ತೇನೆ ಅವರು ಇದನ್ನ ವಿಚಾರ ಮಾಡುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ಮಾನ್ಯ ಮಂತ್ರಿಯವರು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅಲ್ಲಿಗೆ ಹೋಗೋಣ ನಡೆಯಿರಿ ಎಂದು ಹೇಳಿದ್ದರಲ್ಲಿ ಅವರು ಮಾನ್ಯ ಮಂತ್ರಿಯವರ ಘನತೆಗೆ ಸರ್ಕಾರದ ಘನತೆಗೆ ತಕ್ಕದ್ದಲ್ಲ ಎಂದು ಮಾನ್ಯ ಉಪನಾಯಕರು ಅಭಿಪ್ರಾಯಪಟ್ಟರು. ಆ ತರಹದ

ಡಿಗ್ನಿಟಿ, ಡೆಕೋರೋಮ್ ಬ್ರಿಟೀಷ್ ಸಿಸ್ಟಂನಿಂದ ಬಂದಿರತಕ್ಕಂಥಾದ್ದು ಏನಿದೆ ಅದನ್ನು ನಾವು ಬಿಡುವುದು ಒಳ್ಳೆಯದು. ಮಾನ್ಯಮಂತ್ರಿಯವರು ಮಾನ್ಯಸದಸ್ಯರನ್ನು ಏನು ಕರೆದಿದ್ದಾರೆ ಅದನ್ನು ನಾವು ನಿಜವಾಗಿಯೂ ಬೆಂಬಲಿಸುತ್ತೇವೆ. ಮಾನ್ಯಮಂತ್ರಿಯವರು ಏನೂ ಆಕಾಶದಿಂದ ಇಳಿದು ಬಂದಿಲ್ಲ. ಅವರು ಇಂತಹ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ರಸ್ತೆಗೂ ಇಳಿಯಬೇಕು, ಅಂಗಡಿಗೂ ಹೋಗಬೇಕು. ಆಗ ಸಮಸ್ಯೆಗಳು ಬೇಗ ಬಗೆಹರಿಯುತ್ತವೆ, ಆದ್ದರಿಂದ ಅವರು ಮಾನ್ಯಸದಸ್ಯರನ್ನು ಕರೆದಿರುವುದು ಸರಿ ಇದೆ. ಬ್ರಿಟಿಷ್ ಸಿಸ್ಟಂನಲ್ಲಿದ್ದಂಥ ಸೆನ್ಸ್, ಆಫ್ ಡಿಗ್ನಿಟಿ ಎಲ್ಲಾ ಈಗ ಹೋಗಿದೆ, ಅದನ್ನು ಮತ್ತೆ ಇಟ್ಟುಕೊಳ್ಳುವುದು ಬೇಡ. ಮಾನ್ಯ ಮಂತ್ರಿಯವರು ಮಾನ್ಯ ರಾಮದೇವ್‌ರವರನ್ನು ಅಲ್ಲಿಗೆ ಕರೆದುಕೊಂಡು ಹೋಗುವುದು ಸೂಕ್ತ.

ಅಧ್ಯಕ್ಷರು.—ಮಾನ್ಯ ರಾಮದೇವ್ ಅವರೇ, ಪುನಃ ಅದೇ ವಿಚಾರವನ್ನು ಇಲ್ಲಿ ಎತ್ತುವುದು ಬೇಡ.

Notice of call Attention

re: Aluminium Factory at Belgaum

SRI B. B. SAYANAK.—Sir, I had given a Call Attention Notice on the second. It pertains to the Aluminium Factory, 1300 labourers.....

MR. SPEAKER.—I am not permitting. Please resume your seat.

SRI B. B. SAYANAK.—The Chief Minister is here. Let him intervene and take the initiative. That is a very important matter.

MR. SPEAKER.—Why don't you listen me? You are a Member of the Business Advisory Committee. Except the subjects mentioned in the agenda printed yesterday, no other subject will be taken up. that was decided in the Business Advisory Committee.

SRI B. B. SAYANAK.—You have given a chance to Sri P. Ramdev. This is very important.

Sir, this Indian Aluminium Company's matter is most important. Let the Hon. Chief Minister intervene and take the initiativer

MR. SPEAKER.—Why don't you listen me?

SRI B. B. SAYANAK.—I am listening Sir.

MR. SPEAKER.—You were also in the Business Advisory Committee meeting. The agenda has been printed yesterday only. I can't include other business.

SRI B. B. SAYANAK.—Sir, this is a most important thing. The Government is lossing rupees One crore every month.

MR. SPEAKER.—Sri Sayanak, please resume your seat. If you respect the same thing. I am sorry.

SRI B. B. SAYANAK.—Sir, the Hon. Chief Minister is ready to answer that question. Why are you not going to permit him?

SRI R. GUNDU RAO.—Whatever the hon. member has said, I will get it examined and do the needful.